# ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 11ಬಿ ವಿತರಿಸುವಲ್ಲಿನ ಸಂದರ್ಭದಲ್ಲಿನ ಸಮಸ್ಯೆಗಳ ಬಗ್ಗೆ.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| 1. | ಹಸಿರು ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ರೆವಿನ್ಯೂ ನಿವೇಶನಗಳು ಮತ್ತು ಕಟ್ಟಡಗಳಿಗೆ 11ಬಿ ನೀಡಬಹುದೇ? | ಹಸಿರು ವಲಯ ಹೊರತುಪಡಿಸಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ 1) ದಿನಾಂಕ:14-06-2013 ಕ್ಕಿಂತ ಮುಂಚೆ 1, 2 ಅಥವಾ 3 ಬಾರಿ ಮಾರಾಟ ಹಾಗೂ ಕ್ರಯಗಳಿಗೆ ಒಳಪಟ್ಟಿರುವ ನಿವೇಶನಗಳು, 2) ದಿನಾಂಕ: 14-06-2013ಕ್ಕೆ ಮೊದಲು ಕಟ್ಟಡವಾಗಿದ್ದು, ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಪ್ರಕರಣಗಳು, 3) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (1) ರನ್ವಯ ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳು ಮತ್ತು 4) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (2) ರನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-11ಬಿ ಅನ್ನು ನೀಡಬಹುದು ಮತ್ತು ನೊಂದಾಯಿಸಬಹುದು. |
| 2. | ದಿ.14/06/2013 ಕ್ಕಿಂತ ಮೊದಲು 1 ಅಥವಾ ಹೆಚ್ಚಿನ ಬಾರಿ ನೊಂದಣಿಯಾಗಿರುವ ಹಸಿರು ವಲಯದ ಅನಧಿಕೃತ ಕಟ್ಟಡ ಮತ್ತು ನಿವೇಶನಗಳಿಗೆ 11ಬಿ ನೀಡಬಹುದೇ? | ಹಸಿರು ವಲಯದ ಅನಧಿಕೃತ ಕಟ್ಟಡ ಮತ್ತು ನಿವೇಶನಗಳಿಗೆ 11ಬಿ ನೀಡಲು ಅವಕಾಶವಿರುವುದಿಲ್ಲ. ಈ ಬಗ್ಗೆ ಅಭಿಪ್ರಾಯ ಪಡೆಯಲು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗಿದೆ. |
| 3 | ದಿ.03/02/2014 ರ ಸುತ್ತೋಲೆಯನ್ವಯ 14/06/2013ಕ್ಕಿಂತ ಹಿಂದೆಯೇ ನೊಂದಣಿಯಾದ ಕಟ್ಟಡ ಮತ್ತು ನಿವೇಶನಗಳಿಗೆ 11ಬಿ ನೀಡಲು ತಿಳಿಸಲಾಗಿತ್ತು. ಆದರೆ 22/07/2014 ರಂದು ನೀಡಿದ ಸುತ್ತೋಲೆಯನ್ವಯ ಹಸಿರುಪಟ್ಟಿ ವಲಯದ ಕಟ್ಟಡ ಮತ್ತು ನಿವೇಶನಗಳಿಗೆ 11 ಬಿ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಲಾಗಿದೆ. 11ಎ ಮತ್ತು 11 ಬಿ ಮೂಲತಃ ತೆರಿಗೆ ಸಂಗ್ರಹಿಸುವ ನಮೂನೆಗಳಾಗಿದ್ದು ಈಗಾಗಲೇ ಗ್ರಾ.ಪಂ.ಗಳ ಬೇಡಿಕೆ ನಮೂನೆ ಗಳ ಹಸಿರುಪಟ್ಟಿ ವಲಯದಲ್ಲಿನ ನಿವೇಶನಗಳು ಮತ್ತು ಕಟ್ಟಡಗಳು ನಮೂದಾಗಿದ್ದು ಈ ಆಸ್ತಿಗಳಿಗೆ ಈಗಾಗಲೇ ತೆರಿಗೆ ಸಂಗ್ರಹಿಸುತ್ತಿದ್ದು ಸದರಿ ಆಸ್ತಿಗಳಿಗೆ ತೆರಿಗೆ ಕಟ್ಟುವ ಮಾಲೀಕರು ನಮೂನೆ 11 ಬಿ ನೀಡುವಂತೆ ಅರ್ಜಿ ಸಲ್ಲಿಸುತ್ತಿರುತ್ತಾರೆ. ಇಂತಹ ಆಸ್ತಿಗಳಿಗೆ ತೆರಿಗೆ ಸಂಗ್ರಹಿಸಬಹುದೇ? | ಹಸಿರು ವಲಯದ ಅನಧಿಕೃತ ಕಟ್ಟಡ ಮತ್ತು ನಿವೇಶನಗಳಿಗೆ 11ಬಿ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಉದ್ದೇಶಕ್ಕಾಗಿ ನಮೂನೆ 11ಬಿ ಯನ್ನು ನೀಡಬಹುದು ಆದರೆ ನೋಂದಣಿಗೆ ಅವಕಾಶವಿರುವುದಿಲ್ಲ. |

| | | |
|---|---|---|
| 4. | 1,2,3 ಬಾರಿ ನೊಂದಣಿಯಾದ ಆಸ್ತಿಗಳಿಗೆ ನೊಂದಣಿ ದಿನಾಂಕ ಮತ್ತು ನೊಂದಣಿ ಸಂಖ್ಯೆ ಯಾವುದನ್ನು ನಮೂದಿಸಬೇಕು | ಪ್ರಸ್ತುತ ನೊಂದಣಿಯಾಗಿರುವ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸಬೇಕಾಗುತ್ತದೆ. |
| 5. | 1 ಮತ್ತು 1 ಕ್ಕಿಂತ ಹೆಚ್ಚು ನಿವೇಶನಗಳನ್ನು ಒಂದೇ ಕ್ರಯ ಪತ್ರದಲ್ಲಿ ನೊಂದಣಿಯಾಗಿದ್ದು ದಿ.14/06/2013ರ ಹಿಂದೆ ನಡೆದಿದ್ದರೂ ಖಾತೆ ಮಾಡಲು ಬರುತ್ತಿಲ್ಲ. | ಫಾರಂ-9 ಕ್ಕೆ ಕುರಿತಾದಂತೆ ಒಬ್ಬನು ಒಂದಕ್ಕಿಂತ ಹೆಚ್ಚಿನ ಕೋರಿಕೆಯನ್ನು ಸೃಷ್ಟಿಸಬಹುದಾಗಿರುತ್ತದೆ ಅಥವಾ ಒಂದಕ್ಕಿಂತ ಹೆಚ್ಚು ಪರಿವರ್ತನೆಗೆ ಕೋರಿಕೆ ಇದ್ದಲ್ಲಿ ಸಂದರ್ಭನುಸಾರ ಕೋರಿಕೆಯ ಪ್ರಕ್ರಿಯೆಗೆ ಚಾಲನೆ ನೀಡಬಹುದಾಗಿರುತ್ತದೆ. |
| 6. | 1 ಮತ್ತು 1ಕ್ಕಿಂತ ಹೆಚ್ಚು ಎಕರೆ ಕೃಷಿಯೇತರ ಭೂಮಿಯನ್ನು ಬೇರೆಯವರಿಗೆ ಪೂರ್ಣ ಮಾರಾಟ ಮಾಡಲು ಖಾತೆ ಮಾಡಲು ಗೊಂದಲವಿದೆ. ಪೂರ್ತಿ ಮಾರಾಟ ಮಾಡಲು ಕಂದಾಯ ಇಲಾಖೆಯ ಆದೇಶವಿದೆ. | ಇಲ್ಲಿ ವಿಸ್ತಾರದ ವಿಷಯ ಅಪ್ರಸ್ತುತ. ಉಪನೊಂದಣಾಧಿಕಾರಿಯು ಈ ಬಗ್ಗೆ ಈ ಕರೆಯನ್ನು ಸ್ವೀಕರಿಸಬಹುದಾಗಿರುತ್ತದೆ. ಈ ಉಪನೊಂದಣಾಧಿಕಾರಿಯು ಇ-ಸ್ವತ್ತಿಗೆ ಸಂಪರ್ಕ ಕಲ್ಪಿಸಿದಲ್ಲಿ ಫಾರಂ-9/11ಕ್ಕೆ ಸಂಬಂಧಪಟ್ಟಂತೆ ಡಾಟಾವನ್ನು ಒದಗಿಸಬಹುದಾಗಿರುತ್ತದೆ. |
| 7. | ಸಕಾಲ ಸೇವೆಯಲ್ಲಿ ತೆರಿಗೆ ನಿರ್ಧರಣೆ ಪಟ್ಟಿ ಬದಲಾವಣೆ ಎಂಬ ಸೇವೆ ಇದೆ. ಆದರೆ ಸಕ್ರಮವಲ್ಲದ ಆಸ್ತಿಗೆ ಮತ್ತು ಅಧಿಕೃತ ಆಸ್ತಿಗೆ ತೆರಿಗೆ ನಿರ್ಧರಣೆ ಪಟ್ಟಿಗೆ ಸೇರ್ಪಡೆ ಎಂಬ ಸೇವೆ ಇರುವುದಿಲ್ಲ. | ಕರ ನಿರ್ಧರಣಾ ಪಟ್ಟಿಯ ಬದಲಾವಣೆ ಮಾಡಲು ಸಕಾಲದಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದು ಕ್ರಮಬದ್ಧ ಆಸ್ತಿಗಳಿಗೆ ಸಂಬಂಧಿಸಿರುತ್ತದೆ. ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ 11 ಬಿ ನೀಡಲು. ಸಕಾಲ ಸೇವೆಯಡಿ ಸೇರಿಸಲು ಕ್ರಮ ವಹಿಸಲಾಗುವುದು. |
| 8. | ದಿ.14/06/2013ರ ಹಿಂದೆ ನೊಂದಣೀಯಾಗಿದ್ದು ಗ್ರಾ.ಪಂ.ಗಳಲ್ಲಿ ಅಧಿಕೃತ ನಮೂನೆಗಳನ್ನು ಪಡೆಯದೇ ನೊಂದಣಿ ಮಾಡಲಾಗಿರುವ ಆಸ್ತಿಗಳಿಗೆ 11 ಬಿ ನೀಡಬಹುದೆ? | ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಪರಿಶೀಲಿಸಿ, ದಿನಾಂಕ:14-06-2013 ಕ್ಕಿಂತ ಹಿಂದೆ ನೋಂದಾಣಿಯಾಗಿದ್ದರೆ ಆಸ್ತಿಗಳಿಗೆ 11ಬಿ ನೀಡಬಹುದಾಗಿದೆ. |
| 9. | 30*40, 40*60 ಕ್ಕಿಂತ ಹೆಚ್ಚಿನ ಅಳತೆಯ ನಿವೇಶನಗಳನ್ನು 14/06/2013ಕ್ಕಿಂತ ಹಿಂದೆ ನೊಂದಣಿಯಾಗಿದ್ದು ಸದರಿ ಸ್ವತ್ತುಗಳನ್ನು ನೊಂದಣಿ ಮಾಡಬಹುದೇ? | ನೋಂದಣಿ ಮಾಡಬಹುದಾಗಿದೆ. |
| 10. | 11ಬಿ ಆಸ್ತಿಗಳಿಗೆ ಕಟ್ಟಡ ಪರವಾನಗಿ ಮತ್ತು ಎನ್.ಓ.ಸಿ ನೀಡಲು ಅವಕಾಶದ ಬಗ್ಗೆ. | ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ನಿಯಮಾನುಸಾರವಿದ್ದಲ್ಲಿ 11ಬಿ ಆಸ್ತಿಗಳಿಗೆ ಕಟ್ಟಡ ಪರವಾನಗಿ ಮತ್ತು ಎನ್.ಓ.ಸಿ ನೀಡಲು ಅವಕಾಶವಿದೆ. |
| 11. | ಈಗಾಗಲೇ 9 ಮತ್ತು 11ಎ ಮತ್ತು 11ಬಿ ಸೇರ್ಪಡೆಯಾಗಿದ್ದಲ್ಲಿ ಪ್ರಕಟಣೆ ಮತ್ತು ಮಹಜರು ಮಾಡುವ ಅವಶ್ಯಕತೆ ಇದೆಯೇ? | ಈಗಾಗಲೇ 9 ಮತ್ತು 11ಎ ಮತ್ತು 11ಬಿ ಸೇರ್ಪಡೆಯಾಗಿದ್ದಲ್ಲಿ ಪ್ರಕಟಣೆ ಮತ್ತು ಮಹಜರು ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ಕರನಿರ್ಧರಣಾ ಪಟ್ಟಿಯ ಬದಲಾವಣೆ ಮಾಡಲು ಪ್ರಕಟಣೆ ಮತ್ತು ಮಹಜರ್ ಮಾಡಲು ಅವಕಾಶವಿರುತ್ತದೆ. |
| 12. | 11ಬಿ ಗಳ ಆಸ್ತಿಗಳು ಮಹಜರ್ ಮಾಡಿದಾಗ ಅಧಿಕೃತ ಆಸ್ತಿ ಎಂಬ ಮಾನ್ಯತೆ ದೊರೆಯುತ್ತದೆ. ಆದರೆ 11ಬಿ ಆಸ್ತಿಗಳಿಗೆ ನಕ್ಷೆ ಇರುವುದಿಲ್ಲ. ಅಳತೆ ಸರಿ ಇರುವುದಿಲ್ಲ. ಸ್ಥಳದ | ಅರ್ಜಿದಾರರು ಕಂದಾಯ ಅಧಿಕಾರಿಗಳು ಮತ್ತು ಸರ್ವೆ ಇಲಾಖೆಯಿಂದ ಸ್ಥಳದ ಬಗ್ಗೆ ದೃಢೀಕರಿಸಿ, ಮಾಹಿತಿ ನೀಡಬೇಕಾಗುತ್ತದೆ. |

| | | |
|---|---|---|
| | ಅಗತ್ಯಕ್ಕಿಂತ ನಿವೇಶನವನ್ನು ರಚನೆ ಮಾಡಿರುತ್ತಾರೆ. ಕಂದಾಯ ಸ್ಥಳದ ಬಗ್ಗೆ ಕಂದಾಯ ಅಧಿಕಾರಿಗಳು ಮತ್ತು ಸರ್ವೆ ಇಲಾಖೆಯಿಂದ ಧೃಢೀಕರಿಸಿ ನೀಡಿದರೆ ಸ್ಥಳದ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುತ್ತದೆ. | |
| 13. | ರೆವಿನ್ಯೂ ಸ್ಥಳದಲ್ಲಿ ನಿವೇಶನಗಳು ರಚನೆ ಮಾಡುವಾಗ ನಿವೇಶನ ರಚನೆ ಮಾಡುವವರು ಭೂಮಾಲೀಕರಿಂದ ನೊಂದಣಿಯಾದ ಕೂಡಲೇ ನಿವೇಶನ ರಚನೆ ಮಾಡಿ ಮಾರಾಟ ಮಾಡಿರುತ್ತಾರೆ. ಇದರಿಂದ ಪೋಡ್ ಬದಲಾಗಿ ಸರ್ವೆ ನಂ. ಬದಲಾಗಿರುತ್ತದೆ. ಉದಾಹರಣೆ 60 ಸರ್ವೆ ನಂ. ಆಗಿದ್ದರೆ 60/1ಎಂದು ಆಗಿರುತ್ತದೆ. | ಪ್ರಸ್ತುತ ಇರುವ ಸರ್ವೆ ನಂಬರನ್ನು ನಮೂದಿಸಬೇಕಾಗುತ್ತದೆ. |
| 14. | ಕಂದಾಯ ಇಲಾಖೆಯಿಂದ ಗ್ರಾಮ ಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಸಂಬಂಧಿಸಿದ ಧೃಢೀಕರಣ ನೀಡುವ ಬಗ್ಗೆ ಗ್ರಾ.ಪಂ. ವ್ಯಾಪ್ತಿಯ ಘನ ತ್ಯಾಜ್ಯ ದ್ರವ ತ್ಯಾಜ್ಯ ವಿಲೇವಾರಿಗೆ ಅವಶ್ಯವಿರುವ ಜಮೀನು ಒದಗಿಸುವ ಬಗ್ಗೆ ಹಾಗೂ ಅನಧಿಕೃತ ಬಡಾವಣೆಗಳು ನಿರ್ಮಾಣ ಆಗುತ್ತಿರುವುದನ್ನು ಅಗತ್ಯ ಸ್ಪಂದನೆ ಸಹಕಾರ ಸಿಗುತ್ತಿರುವುದಿಲ್ಲ. ಇದರ ಬಗ್ಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ. | ಕಂದಾಯ ಇಲಾಖೆಯು ದಿನಾಂಕ:14-06-2013 ರಂದು ಹೊರಡಿಸಿರುವ ಸುತ್ತೋಲೆಯ ಅನುಸಾರ ತಹಶೀಲ್ದಾರವರು ಗ್ರಾಮ ಠಾಣಾ ಪ್ರದೇಶವನ್ನು ಧೃಢೀಕರಿಸಿ, ನೀಡಬೇಕಾಗುತ್ತದೆ ಮತ್ತು ಅನಧಿಕೃತ ಬಡಾವಣೆಗಳನ್ನು ಕಂದಾಯ ಇಲಾಖೆಯವರು ತಡೆಗಟ್ಟಬೇಕಾಗುತ್ತದೆ.<br>ಗ್ರಾ.ಪಂ. ವ್ಯಾಪ್ತಿಯ ಘನ ತ್ಯಾಜ್ಯ ದ್ರವ ತ್ಯಾಜ್ಯ ವಿಲೇವಾರಿಗೆ ಅವಶ್ಯವಿರುವ ಜಮೀನು ಒದಗಿಸುವ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯತಿಯವರು ಕಂದಾಯ ಇಲಾಖೆಯೊಡನೆ ವ್ಯವಹರಿಸಿ, ಜಮೀನನ್ನು ಪಡೆಯಬೇಕಾಗುತ್ತದೆ. |
| 15. | ಇ-ಸ್ವತ್ತುವಿನಲ್ಲಿ ನಮೂನೆ 9, 11ಎ ಮತ್ತು 11ಬಿ ವಿತರಿಸಲು ಸುರಕ್ಷಿತ ಲೇಖನ ಸಾಮಗ್ರಿ ಮತ್ತು ಹೋಲೋಗ್ರಾಂ ಬೇಡಿಕೆಯ ಕುರಿತು. | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯತಿಗಳ ಆಸ್ತಿಗಳಿಗೆ ಸಂಬಂಧಿಸಿದಂತೆ 1,48,000 ಸುರಕ್ಷಿತ ಲೇಖನ ಸಾಮಗ್ರಿ ಮತ್ತು ಪೋಲೋಗ್ರಾಂವನ್ನು ನೇರವಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಒದಗಿಸುವಂತೆ ದಿನಾಂಕ:24-06-2014 ರಂದು ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ರವರಿಗೆ ಪತ್ರ ಬರೆಯಲಾಗಿದ್ದು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕೋರಿಕೆ ಸಲ್ಲಿಸಿ ಪಡೆಯಬೇಕಾಗುತ್ತದೆ. |
| 16 | ಕರನಿರ್ಧರಣಾ ಪಟ್ಟಿ ಬದಲಾವಣೆ ಮಾಡಿದಾಗ, ಬದಲಾದ ವ್ಯಕ್ತಿಗೆ ನಮೂನೆ 9 ಮತ್ತು 11 ಎ Issue ಮಾಡಿದಾಗ, ಆಸ್ತಿ ಸಂಖ್ಯೆ ಇ-ಸ್ವತ್ತು ತಂತ್ರಾಂಶದಲ್ಲಿ ಡಬಲ್ ಎಂಟ್ರಿ ಆಗಿರುತ್ತೆ, ಪಂಚತಂತ್ರ ತಂತ್ರಾಂಶದಲ್ಲಿ | ಪ್ರಶ್ನೆಯು ಸಮಂಜಸವಾಗಿಲ್ಲ ಪಂಚತಂತ್ರದಲ್ಲಿ ಮಾಲೀಕನ ಹೆಸರು ಬದಲಾವಣೆಗೆ ಆಸ್ಪದ ನೀಡಿರುವುದಿಲ್ಲ. |

| | | |
|---|---|---|
| | ಬದಲಾವಣೆ ಮಾಡಿದ ಆಸ್ತಿ ಮಾಲೀಕರ ಹೆಸರು ಬದಲಾಗುತ್ತಿಲ್ಲ. | |
| 17 | ನಮ್ಮ ಗ್ರಾಮ ಪಂಚಾಯತಿಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಒಂದೇ ಗ್ರಾಮದಲ್ಲಿ ಒಬ್ಬನೇ ಮಾಲೀಕನಿಗೆ ಎರಡು ಅಥವಾ ಮೂರು ಸ್ಥಳಗಳಲ್ಲಿ ಆಸ್ತಿ ಇದ್ದರೂ, ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವಾಗ ಒಂದೇ ಕಡೆ ಎಂಟ್ರಿ ಮಾಡಿರುತ್ತಾರೆ. ಉದಾ: 233/2, 84/1ಎ, 23/1 ಈಗ ಇ-ಸ್ವತ್ತು ತಂತ್ರಾಂಶದಲ್ಲಿ ಮೂರು ಆಸ್ತಿಗೆ ಪ್ರತ್ಯೇಕವಾಗಿ ನಮೂನೆ-9 ಮತ್ತು 11ಎ ವಿತರಿಸಲು ಸ್ಪಷ್ಟೀಕರಣ ಬೇಕು. | ಇಲ್ಲಿ ಮೂರು ತರಹದ ಫಾರಂ-9 ನ್ನು ಸೃಜಿಸುವ ಅವಶ್ಯಕತೆ ಇರುತ್ತದೆ. ಅವುಗಳ ಪೈಕಿ ಒಂದು ಫಾರಂ-9 ನ್ನು ಹಳೇ ಪಂಚತಂತ್ರದ ಆಸ್ತಿಗೆ ಜೋಡಿಸಬಹುದಾಗಿರುತ್ತದೆ. ಇನ್ನುಳಿದ ಎರಡು ಫಾರಂ-9 ನ್ನು ಹೊಸ ಆಸ್ತಿಯೆಂದು ಇ-ಸ್ವತ್ತಿಗೆ ಲಗತ್ತಿಸಬಹುದಾಗಿರುತ್ತದೆ. |
| 18 | ಒಬ್ಬ ಮಾಲೀಕನ ಹೆಸರಿನಲ್ಲಿ ಗ್ರಾಮ ಪಂಚಾಯತಿಯ ಪಂಚತಂತ್ರ ಆಸ್ತಿ ಪಟ್ಟಿ / ಕರನಿರ್ಧರಣಾ ಪಟ್ಟಿಯಲ್ಲಿ ಖಾತೆ ಇದ್ದು, ಆತ ಮೃತ ಹೊಂದಿದ್ದು, ನಮೂನೆ-9 & 11 ವಿತರಿಸಿರುವುದಿಲ್ಲ. ಈಗ ತಂದೆ ಹೆಸರಿನಿಂದ ಮಗನ ಹೆಸರಿಗೆ ಬದಲಾವಣೆ ಮಾಡಿ ಇ-ಸ್ವತ್ತು ತಂತ್ರಾಂಶದಲ್ಲಿ ನಮೂನೆ 9 & 11 ವಿತರಿಸುವುದು ಹೇಗೆ. | ಮರಣ ಪ್ರಮಾಣ ಪತ್ರ ಮತ್ತು ಸಂಬಂಧಿಸಿದ ದಾಖಲೆಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ಕ್ರಮವಹಿಸಿ ನಮೂನೆ-9 ಮತ್ತು 11ಎ ನ್ನು ನೀಡಬಹುದಾಗಿದೆ. |
| 19 | ಒಬ್ಬ ಮಾಲೀಕನಿಗೆ ಒಟ್ಟು ವಿಸ್ತೀರ್ಣ 60*40 ಖಾಲಿ ನಿವೇಶನ ಇದ್ದು, ಇಬ್ಬರು ಮಕ್ಕಳಿಗೆ 30*20 ಆಗಿ ವಿಸ್ತೀರ್ಣ ಖಾತೆ ಬದಲಾವಣೆ ಮಾಡಬೇಕು. ಮ್ಯುಟೇಷನ್ ಹೇಗೆ ಮಾಡಬೇಕು ಸ್ಪಷ್ಟೀಕರಣ ನೀಡಲು | ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿದೆ |
| 20 | ಕರನಿರ್ಧರಣಾ ಪಟ್ಟಿ ಬದಲಾವಣೆ ಮಾಡಿದಾಗ, ಬದಲಾದ ವ್ಯಕ್ತಿಗೆ ನಮೂನೆ 9 ಮತ್ತು 11 ಎ Issue ಮಾಡಿದಾಗ, ಆಸ್ತಿ ಸಂಖ್ಯೆ ಇ-ಸ್ವತ್ತು ತಂತ್ರಾಂಶದಲ್ಲಿ ಡಬಲ್ ಎಂಟ್ರಿ ಆಗಿರುತ್ತೆ, ಪಂಚತಂತ್ರ ತಂತ್ರಾಂಶದಲ್ಲಿ ಬದಲಾವಣೆ ಮಾಡಿದ ಆಸ್ತಿ ಮಾಲೀಕರ ಹೆಸರು ಬದಲಾಗುತ್ತಿಲ್ಲ. | ಇಲ್ಲಿ ಮೂರು ತರಹದ ಫಾರಂ-9 ನ್ನು ಸೃಜಿಸುವ ಅವಶ್ಯಕತೆ ಇರುತ್ತದೆ. ಅವುಗಳ ಪೈಕಿ ಒಂದು ಫಾರಂ-9 ನ್ನು ಹಳೇ ಪಂಚತಂತ್ರದ ಆಸ್ತಿಗೆ ಜೋಡಿಸಬಹುದಾಗಿರುತ್ತದೆ. ಇನ್ನುಳಿದ ಎರಡು ಫಾರಂ-9 ನ್ನು ಹೊಸ ಆಸ್ತಿಯೆಂದು ಇ-ಸ್ವತ್ತಿಗೆ ಲಗತ್ತಿಸಬಹುದಾಗಿರುತ್ತದೆ. |

ಗ್ರಾಅಪ 293 ಗ್ರಾಪಂಅ 2014

C. No. 76855

ಎಲ್‌ಎನ್ ಕಲಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾ. ಅ ಮತ್ತು ಪಂ. ರಾ ಇಲಾಖೆ